16.	ಮೈಸೂರು	93
17.	ಬಳ್ಳಾರಿ	52
18.	ಬೀದರ್	47
19.	ಗುಲ್ಬರ್ಗಾ	50
20.	ರಾಯಚೂರು	48
	ಒಟ್ಟು	1169

ಬೆಂಗಳೂರು ಜಲಮಂಡಳಿಯಲ್ಲಿ ಬೆಳಗಿನ ಸಮಯದಲ್ಲಿ ಹಣಪಾವತಿ ಕೌಂಟರ್‌ಗಳನ್ನು ತೆರೆಯುವ ಬಗ್ಗೆ

2103: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಜಲ ಮಂಡಳಿಯಲ್ಲಿ ಹಣ ಪಾವತಿ ಮಾಡುವ ಕೌಂಟರುಗಳು ಜಯನಗರದಲ್ಲಿ ಕಛೇರಿ ವೇಳೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸಾರ್ವಜನಿಕರಿಗೆ ಹಾಗೂ ಉದ್ಯೋಗಸ್ಥ ನೌಕರರಿಗೆ ಸದರಿ ಸಮಯದಲ್ಲಿ ಹಣಪಾವತಿ ಮಾಡಲು ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ವಿದ್ಯುತ್ ಮಂಡಳಿಯಲ್ಲಿರುವಂತೆ ಬೆಳಿಗ್ಗೆ 8–30ಕ್ಕೆ ಕೌಂಟರುಗಳನ್ನು ತೆರೆಯುವುದರ ಜೊತೆಗೆ ಆಯಾ ಬಡಾವಣೆಗಳಲ್ಲಿ ಹಣ ಪಾವತಿ ಮಾಡಲು ಸಾರ್ವಜನಿಕರಿಗೆ ಅನುಕೂಲವಾಗಲು ಸಂಚಾರಿ ಘಟಕಗಳನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಬಂದಿದೆ. ಪ್ರಸ್ತುತ ಜಯನಗರ ಜಲಮಂಡಳಿ ಕಛೇರಿಯಲ್ಲಿ ಎರಡು ಹಣ ಪಾವತಿ ಮಾಡುವ ಕೌಂಟರುಗಳಿದ್ದು ಅವು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾನ 2.00 ಘಂಟೆಗಳವರೆಗೆ ಕೆಲಸ ಮಾಡುತ್ತಿದೆ. ಆದರಲ್ಲಿ ಜಲ ಮಂಡಳಿ ಕೌಂಟರ್‌ನ್ನು ಸಾರ್ವಜನಿಕರ ಅನುಕೂಲಕ್ಕಾಗಿ, ಬೆಳಿಗ್ಗೆ 8.30ಕ್ಕೆ ತೆರೆಯಲು ಅನುವು ಮಾಡಿಕೊಡಲಾಗುವುದು.

ಆ. ಆಯಾ ಬಡಾವಣೆಗೆ ಸಂಬಂಧಿಸಿದ ಸೇವಾ ಠಾಣೆಯಲ್ಲಿ ಒಂದೊಂದು ಜಲ ಮಂಡಳಿಯ ಹಣ ಪಾವತಿ ಮಾಡುವ ಕೌಂಟರುಗಳನ್ನು ತೆರೆಯಲಾಗಿದ್ದು ಅವು ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಆದುದರಿಂದ ಸಂಚಾರಿ ಕೌಂಟರುಗಳನ್ನು ಸ್ಥಾಪಿಸುವ ಅವಶ್ಯಕತೆ ಸಧ್ಯದಲ್ಲಿ ಜಲಮಂಡಳಿಗೆ ಇಲ್ಲ.

ಆಗ್ರೋ ಪ್ರೋಟೀನ್ಸ್ ನೌಕರರನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ

1412: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಯಚೂರಿನಲ್ಲಿದ್ದ ಕರ್ನಾಟಕ ಆಗ್ರೋ ಪ್ರೋಟಿನ್ಸ್ ನಿಯಮಿತಿಯನ್ನು ಕರ್ನಾಟಕ ಎಣ್ಣೆ